# ಯುವಕರಿಂದ ವಿಕಸಿತ ಭಾರತ್ ಸಾಧ್ಯ

**ಸಂ.ಕ.ಸಮಾಚಾರ, ಮಂಗಳೂರು**

ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ್ ಭಾರತ್ 2047ರ ಗುರಿ ತಲುಪಲು ಯುವ ಸಮುದಾಯ ಮಹತ್ವದ್ದಾಗಿದೆ ಎಂದು ವೋಲ್ವೋ ಗ್ರೂಪ್ ಆಫ್ ಇಂಡಿಯಾದ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಕಮಲ್ ಬಾಲಿ ಹೇಳಿದರು.



ಸುರತ್ಕಲ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಇದರ 23ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಪದವಿ ಪ್ರದಾನಗೈದು ಮಾತನಾಡಿ, ದೇಶದ ಜಿಡಿಪಿ ಏರುಗತಿಯಲ್ಲಿದ್ದು ತಲಾ ಆದಾಯವು ಏರುಗತಿಯನ್ನು ಕಾಣಬೇಕಿದೆ ಎಂದರು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಪ್ರಾಥಮಿಕವಾಗಿ ಮಾತನಾಡಿ, ಸಂಸ್ಥೆಯ ಸಾಧನೆಗಳನ್ನು ವಿವರಿಸಿದರು. 1995 ವಿದ್ಯಾರ್ಥಿಗಳಿಗೆ ಪದವಿ ಪ್ರಧಾನಿಸಲಾಯಿತು. 935 ಬಿ.ಟೆಕ್, 641 ಎಂ.ಟೆಕ್, 23 ಸಂಶೋಧನಾ ವಿಭಾಗದ ಎಂ.ಟೆಕ್, 66 ಎಂಸಿಎ, 69 ಎಂಬಿಎ, 68 ಎಂಎಸ್‌ಇ, 193 ಪಿಎಚ್.ಡಿ, ಪದವಿ, 41 ಸಾಧಕ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು.

ಎನ್‌ಐಟಿಕೆ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ನಿರಂಜನ್ ಮಹಾಬಲಪ್ಪ, ವಿದ್ಯಾರ್ಥಿಗಳ ಪಾಲಕರಾದ ಬಿಹಾರದ ಐಜಿಪಿ ಎಂ.ಆರ್.ನಾಯ್ಕ, ಮಧುಸೂದನ್ ಅಕ್ಕಿರೆಡ್ಡಿ ಅನಿಸಿಕೆ ವ್ಯಕ್ತಪಡಿಸಿದರು. ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

Samyuktha Karnataka, Date: 17/11/25, p. 03